# ಕುಲಕಸುಬಿನ ವಚನಕಾರರು


## ಟಿ. ಲತಾದೇವಿ

ಸಹಪ್ರಾಧ್ಯಾಪಕರು, ಕನ್ನಡ ವಿಭಾಗ, ಕೃಪಾನಿಧಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಕೋರಮಂಗಲ, ಬೆಂಗಳೂರು.


DOI: https://doi.org/10.5281/zenodo.18149824


## ABSTRACT:

ವಚನ ಸಾಹಿತ್ಯ ಕನ್ನಡದ ಹೆಮ್ಮೆಯ ಹಾಗೂ ಕ್ರಾಂತಿಯ ಯುಗವಾಗಿತ್ತು. ಸಾಹಿತ್ಯ ವೈಭವದ ಗದ್ದುಗೆಯನ್ನು ಬಿಟ್ಟು ಸಾಮಾನ್ಯರ ಬಳಿ ನಡೆದ ಕಾಲವದು. ಜನಸಾಮಾನ್ಯರ ವಾಣಿಯಿಂದ ಸಾಹಿತ್ಯ ರಚನೆ ಅಷ್ಟೇ ಅಲ್ಲದೆ ಜೀವನ ತತ್ವ, ನೈತಿಕತೆ, ಸಾಮಾಜಿಕ ನ್ಯಾಯ, ಶ್ರಮದ ಸಮಾನತೆಯನ್ನು ಕೇಂದ್ರವಾಗಿಸಿ ಎಲ್ಲಾ ಜಾತಿಯ ಹಾಗೂ ಎಲ್ಲಾ ವೃತ್ತಿಯವರನ್ನು ತನ್ನ ತೆಕ್ಕೆಗೆ ಹಾಕಿಕೊಂಡು ಶ್ರಮದಿಂದ ಜೀವನ ಕಟ್ಟಿಕೊಳ್ಳುವುದು ಹೀನವಲ್ಲ, ಅದೊಂದು ಪವಿತ್ರ ಕಾರ್ಯವೆಂದು ಭಾವಿಸಿದವರು ಕುಲಕಸುಬಿನವರು. ಕುಲಕ್ಕೆ ತಕ್ಕಂತೆ ಒಂದೊಂದು ವೃತ್ತಿಯನ್ನು ಮಾಡುವವರನ್ನು ಶ್ರೇಷ್ಠ-ಕನಿಷ್ಠ ಎನ್ನದೆ ಗೌರವವನ್ನು ನೀಡಿ ಶ್ರಮ ಮತ್ತು ಮಾನವ ಮೌಲ್ಯಗಳನ್ನು ಉತ್ತೇಜಿಸಲಾಯಿತು.

ಲಿಂಗ ಭೇದವಿಲ್ಲದ, ಜಾತಿಭೇದವಿಲ್ಲದ ಆದರ್ಶದ ತತ್ವಗಳನ್ನು ವಚನಗಳಲ್ಲಿ ಕಾಣಬಹುದು. ಇಲ್ಲಿ ಕಾಯಕವೆನ್ನುವುದು ಕೇವಲ ಭೌತಿಕ ಕ್ರಿಯೆಯಲ್ಲ, ಆತ್ಮದೊಳಗಣ ಜ್ಞಾನ. ಲಿಂಗ ಪೂಜೆ ಮತ್ತು ಕಾಯಕಗಳು ಎರಡು ಸಮಾನವಾದವು. “ಕಾಯಕದಲ್ಲಿ ನಿರತನಾದವನು ಲಿಂಗಪೂಜೆಯನ್ನಾದರೂ ಮರೆಯಬೇಕು” ಎನ್ನುವ ಶರಣರ ನುಡಿಗಳು ಹೆಚ್ಚು ಆಕರ್ಷಿತವಾದವು.

ಶರಣರು ಉದಯವಾಗುವ ಹೊತ್ತಿಗೆ ಬೌದ್ಧಿಕ ವೃತ್ತಿ ಶ್ರೇಷ್ಠ, ದೈಹಿಕ ವೃತ್ತಿ ಕನಿಷ್ಠವೆಂಬ ಮೇಲು-ಕೀಳು ಬೆಳೆದು ನಿಂತು ಮಾನ-ಅಪಮಾನದ ಬಣ್ಣ ಪಡೆದಿತ್ತು. ಈ ಕೃತಕ ತಾರತಮ್ಯವನ್ನು ಅಲ್ಲಗಳೆದು ವೃತ್ತಿಯಲ್ಲಿ ಸಮಾನತೆಯನ್ನು ಸಾರಿದರು. ಜೇಡರ ದಾಸಿಮಯ್ಯ, ಮಾದಾರ ಚೆನ್ನಯ್ಯ, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ ಮುಂತಾದ ವಚನಕಾರರನ್ನು ಕಾಣಬಹುದು.



## KEYWORDS:

ವೃತ್ತಿ ಗೌರವ, ಶ್ರದ್ಧೆ ಹಾಗೂ ಪ್ರಾಮಾಣಿಕತೆ, ಲಿಂಗ ವೃತ್ತಿ ಸಮಾನತೆ, ಕಾಯಕ ಮಹತ್ವ, ಗುರು-ಲಿಂಗ-ಜಂಗಮ, ಅಕ್ಷರ ದಾಸೋಹ.

12ನೇ ಶತಮಾನ ಕನ್ನಡ ಸಂಸ್ಕೃತಿ, ಮಾನವೀಯತೆಗಳ ಸಂಗಮ. ಲಿಂಗ ಸಮಾನತೆ, ಶ್ರಮ ಗೌರವ, ಜಾತ್ಯತೀತತೆಗಳನ್ನು ಕೇಂದ್ರವಾಗಿಸಿ ಹಾಗೂ ಜನಬಳಕೆಯ ಭಾಷೆಯಲ್ಲಿ ಸೃಷ್ಟಿಯಾದ ಸಾಹಿತ್ಯವಾಗಿದೆ. ವಚನ ಸಾಹಿತ್ಯದ ಉದ್ದೇಶ ಕೇವಲ ಭಕ್ತಿಯಷ್ಟೇ ಅಲ್ಲ, ಎಲ್ಲಾ ಕ್ಷೇತ್ರಗಳಲ್ಲಿ ಸಮಾನತೆಯ ಕ್ರಾಂತಿಯಾಗಿದೆ. ಮನಸ್ಸಿನ ಪರಿಶುದ್ಧತೆ, ಕಾಯಕದಲ್ಲಿ ಪ್ರಾಮಾಣಿಕತೆ ಇವುಗಳಿಗೆ ವಚನಗಳು ಸಾಕ್ಷಿಯಾಗಿವೆ. ಪದ್ಯ ರೂಪದಲ್ಲಿ, ಗದ್ಯ ರೂಪದಲ್ಲಿ, ಸಂಭಾಷಣೆ ರೂಪದಲ್ಲಿ ಜನರ ಜೀವನಕ್ಕೆ ಮಾರ್ಗದರ್ಶನ ನೀಡುತ್ತಾ ನಾವು ಬದುಕನ್ನು ಹೇಗೆ ಸಾಗಿಸಬೇಕು ಎಂಬುದನ್ನು ವಚನಗಳಲ್ಲಿ ಕಾಣಬಹುದು. ಕೆಲಸದಲ್ಲಿ ಕೈಲಾಸವನ್ನು ಕಾಣುವ ಪ್ರವೃತ್ತಿ ಕಸುಬಿನ ವಚನಕಾರರದಾಗಿದೆ. ಇದು ಮಾನವೀಯ ಮೌಲ್ಯಗಳ ಶ್ರಮಕ್ಕೆ ದೊರೆಯುವ ಗೌರವದ ಸಾರವನ್ನು ಮನಗಾಣಿಸುತ್ತದೆ. ಭಾವ-ಭಕ್ತಿ-ತತ್ವಗಳ ಮೂರು ರೂಪಗಳಲ್ಲಿ ವಚನಗಳು ಕನ್ನಡದ ಹೃದಯದಲ್ಲಿವೆ. ಹೊಸ ಹೊಸ ಚಿಂತನೆಗೆ, ಹೊಸ ತತ್ವಗಳಿಗೆ ದೀಪದ ಬೆಳಕಾಗಿ ದಾರಿ ತೋರುತ್ತಿವೆ.

ವಚನ ಸಾಹಿತ್ಯವು ಎಲ್ಲಾ ಜಾತಿ, ಎಲ್ಲಾ ಕುಲಕಸುಬಿನವರನ್ನು ತನ್ನ ತೆಕ್ಕೆಗೆ ಹಾಕಿಕೊಂಡು ಸಮೃದ್ಧವಾದ ಸಾಹಿತ್ಯವಾಗಿ ವಿಶ್ವದಾದ್ಯಂತ ಹರಡಿದೆ. ಶ್ರಮದಿಂದ ಜೀವನ ಕಟ್ಟಿಕೊಳ್ಳುವುದು ಹೀನವಲ್ಲ, ಅದೊಂದು ಪವಿತ್ರ ಕೆಲಸವಾಗಿದೆ ಎಂದು ಸಾರುತ್ತಾ, ಅತ್ಯಂತ ಗೌರವದ ಜೀವನವನ್ನು ಸಾಗಿಸಲು ಮಾನವ ಮೌಲ್ಯಗಳನ್ನು ಸಾರುತ್ತಾ ಸದಾ ಜೀವಂತಿಕೆಯನ್ನು ಹೊಂದಿವೆ.

**ಪ್ರಮುಖ ಕುಲಕಸುಬಿನ ವಚನಕಾರರು**

**ಜೇಡರ ದಾಸಿಮಯ್ಯ**

ಮೊದಲ ವಚನಕಾರರಾಗಿ ವಚನಗಳನ್ನು ಬರೆಯುತ್ತಾ ಮುಂದಿನ ವಚನಕಾರರಿಗೆ ಮಾರ್ಗದರ್ಶನ ನೀಡಿದರು. ಇವರು ನೇಕಾರ ವೃತ್ತಿಯನ್ನು ಮಾಡುತ್ತಾ ನೂಲಿನಿಂದ ಬಟ್ಟೆಯನ್ನು ನೇಯುವವರಾಗಿದ್ದರಿಂದ, ಇವರ ವಚನದಲ್ಲಿ ನೂಲಿನ ಬಟ್ಟೆಯಂತೆ ಮನದ ಬಟ್ಟೆಯನ್ನು ಹೊಸೆದಾಗ ಶಿವನೆಡೆ ಸೇರುವುದು ಸುಲಭ ಎಂದರು. ದಿನನಿತ್ಯದ ಕಸುಬೇ ಯೋಗ, ಚೆಲುವ ಬಟ್ಟೆಯಂತೆ ಮನಸ್ಸನ್ನು ನೇಯಬೇಕು; ಅಸತ್ಯ, ಅಹಂಕಾರ, ಕಪಟ ನೂಲುಗಳನ್ನು ತುರುಕಬೇಕು, ಶ್ರಮದಿಂದ ಬಟ್ಟೆ ಹೊಲೆಯುವಂತೆ ಜೀವನವೆಂಬ ಬಟ್ಟೆಯನ್ನು ಹೊಲೆಯಬೇಕೆಂದಿದ್ದಾರೆ. ಜೇಡರ ದಾಸಿಮಯ್ಯರ ವಚನಗಳ ಕೇಂದ್ರ ತತ್ವವೆಂದರೆ ಕಾಯಕವೇ ದೇವರ ಸೇವೆ ಎಂಬ ಭಾವನೆ. ಅವರು ದೇವರನ್ನು ಹುಡುಕಲು ಬಾಹ್ಯ ಆಚರಣೆಗಳು, ಯಾಗ-ಯಜ್ಞಗಳು ಅಥವಾ ಜಾತಿ ಗೌರವ ಅಗತ್ಯವಿಲ್ಲ ಎಂದು ಹೇಳುತ್ತಾರೆ. ಶುದ್ಧ ಮನಸ್ಸಿನಿಂದ ಮಾಡುವ ಶ್ರಮವೇ ನಿಜವಾದ ಪೂಜೆ ಎಂಬುದು ಅವರ ಸಂದೇಶ. ಇದರಿಂದ ಅವರು ಸಮಾಜದಲ್ಲಿನ ಕುಲಭೇದ ಮತ್ತು ವೃತ್ತಿಭೇದವನ್ನು ತಿರಸ್ಕರಿಸುತ್ತಾರೆ.

ಅವರು ಅಹಂಕಾರ, ಮೋಸ, ಬಾಹ್ಯ ಆಚಾರ ಮತ್ತು ಕಪಟ ಭಕ್ತಿಯನ್ನು

ತೀವ್ರವಾಗಿ ಖಂಡಿಸಿದ್ದಾರೆ. ದೇವರನ್ನು ಮೆಚ್ಚಿಸಲು ವೇಷಭೂಷಣ, ಆಡಂಬರ ಅಥವಾ ನಾಟಕೀಯ ಭಕ್ತಿ ಬೇಡ; ಬದಲಾಗಿ ಸತ್ಯ, ನಿಷ್ಠೆ ಮತ್ತು ಪರಿಶ್ರಮ ಬೇಕು ಎಂಬುದು ಅವರ ವಚನಗಳ ಸಾರ. ಜೇಡರ ದಾಸಿಮಯ್ಯರು ಸಾಮಾನ್ಯ ಜನರ ಬದುಕನ್ನು ಪ್ರತಿಬಿಂಬಿಸುವ ಶರಣರಾಗಿದ್ದಾರೆ. ಅವರ ವಚನಗಳು ಸಮಾಜದ ಅಂಚಿನಲ್ಲಿರುವ ಕಾರ್ಮಿಕ ವರ್ಗಕ್ಕೆ ಆತ್ಮಗೌರವ ನೀಡುತ್ತವೆ. ಮಾನವ ಮೌಲ್ಯವು ಅವನ ಕುಲದಿಂದಲ್ಲ, ಅವನ ಕೆಲಸ ಮತ್ತು ನಡತೆಯಿಂದ ನಿರ್ಧಾರವಾಗಬೇಕು ಎಂಬ ಸಂದೇಶವನ್ನು ಅವರು ಸಾರುತ್ತಾರೆ.

**ಕಸುಬಿನ ಕಣ್ಣು**
**ನೂಲು ಸತ್ಯದ ನೂಲು**
**ಸುಳ್ಳು ನಾರು ತುರುಕಿ**
**ಬಟ್ಟೆ ಸಿರಿಹೊಲೆವ ರಾಮನಾಥ.**

ಇಲ್ಲಿ ದಾಸಿಮಯ್ಯನವರು ನಮ್ಮ ಬದುಕು ಬಟ್ಟೆಯ ರೀತಿ, ಅದನ್ನು ಹೇಗೆ ಹೊಲೆಯಬೇಕು, ಹೇಗೆ ಧರಿಸಬೇಕು ಎಂಬುದನ್ನು ಬಹಳ ಸೂಕ್ತವಾಗಿ ವಿವರಿಸಿದ್ದಾರೆ.

**ಮಡಿವಾಳ ಮಾಚಯ್ಯ / ವೀರಗಂಟಿ ಮಾಚಯ್ಯ**

ಮಡಿವಾಳ ಮಾಚಯ್ಯ ಹೆಸರೇ ಸೂಚಿಸುವಂತೆ ಮಡಿವಾಳ ಕುಲದಲ್ಲಿ ಜನಿಸಿದವನು. ಈತನೊಬ್ಬ ವೀರನಾಗಿದ್ದನು. ಮಾಚಯ್ಯನು ಕಲ್ಯಾಣದ ಮಹಾಮನೆಯಲ್ಲಿರುವ ಶಿವಶರಣರ ಬಟ್ಟೆಗಳನ್ನು ಶುಚಿ ಮಾಡುವ ಕಾಯಕದಲ್ಲಿ ನಿರತನಾಗಿದ್ದನು. ಈತನ ಬದುಕಿನ ಉದ್ದೇಶವೆಂದರೆ ಯಾರು ಶಿವಭಕ್ತರಾಗಿರುವವರೋ, ಶುದ್ಧ ಪ್ರಾಮಾಣಿಕವಾಗಿ ನಡೆದುಕೊಳ್ಳುವವರೋ ಅಂತಹವರ ಬಟ್ಟೆಯನ್ನು ಮಾತ್ರ ಈತ ಶುಚಿ ಮಾಡುತ್ತಿದ್ದ. ಈತ ಮಡಿ ಮಾಡಿ ಮಹಾಮನೆಗೆ ಕೊಂಡೊಯ್ಯುವಾಗ ಅದನ್ನು ಯಾರೂ ಮುಟ್ಟಬಾರದಿತ್ತು; ಮುಟ್ಟಿದವರಿಗೆ ಕಠಿಣ ಶಿಕ್ಷೆ ಕೊಡುತ್ತಿದ್ದ. ಈತನ ದೃಷ್ಟಿಯಲ್ಲಿ ಕಾಯಕನಿಷ್ಠೆ ಎಂದರೆ ಹೀಗೆ ತಿಳಿಸಿದ್ದಾನೆ: "ಅರಸುತನ ಮೇಲಲ್ಲ, ಅಗಸುತನ ಕೀಳಲ್ಲ" ಎಂದು ತಿಳಿಸಿದ ವಚನಕಾರ.

ಮಡಿವಾಳ ಮಾಚಯ್ಯರ ವಚನಗಳ ಪ್ರಮುಖ ಸಂದೇಶವೆಂದರೆ 'ಕಾಯಕವೇ ಕೈಲಾಸ' ಎಂಬ ತತ್ವ. ತಮ್ಮ ದೈನಂದಿನ ಶ್ರಮವೇ ದೇವರ ಪೂಜೆ ಎಂದು ಅವರು ನಂಬಿದರು. ದೇವರನ್ನು ಮೆಚ್ಚಿಸಲು ಬಾಹ್ಯ ಆಚಾರ, ಜಾತಿ ಗೌರವ ಅಥವಾ ಆಡಂಬರ ಅಗತ್ಯವಿಲ್ಲ; ಶುದ್ಧ ಮನಸ್ಸಿನಿಂದ ಮಾಡುವ ಕೆಲಸವೇ ನಿಜವಾದ ಭಕ್ತಿ ಎಂದು ಅವರು ಸಾರುತ್ತಾರೆ. ಅವರ ವಚನಗಳಲ್ಲಿ ಕುಲಭೇದದ ವಿರುದ್ಧದ ತೀವ್ರ ವಿರೋಧ ಕಂಡುಬರುತ್ತದೆ. ಸಮಾಜದಲ್ಲಿ ಮಡಿವಾಳ ವೃತ್ತಿಯನ್ನು ತಳಮಟ್ಟದ ಕೆಲಸವೆಂದು ಕಾಣುತ್ತಿದ್ದವರ ವಿರುದ್ಧವಾಗಿ, ಮಡಿವಾಳ ಮಾಚಯ್ಯರು ಪ್ರತಿಯೊಂದು ವೃತ್ತಿಯೂ ಸಮಾನವಾಗಿ ಪವಿತ್ರ ಎಂಬ ಸಂದೇಶ ನೀಡಿದರು. ಮಾನವನ ಮೌಲ್ಯ ಅವನ ಕುಲದಿಂದಲ್ಲ, ಅವನ ಶ್ರಮ, ಸತ್ಯನಿಷ್ಠೆ ಮತ್ತು ನಡತೆಯಿಂದ ನಿರ್ಧಾರವಾಗಬೇಕು

ಎಂದು ಅವರು ಒತ್ತಿ ಹೇಳುತ್ತಾರೆ.

ಮಡಿವಾಳ ಮಾಚಯ್ಯರ ವಚನಗಳು ಸರಳ ಭಾಷೆಯಲ್ಲಿ ಗಂಭೀರ ತತ್ವವನ್ನು ಹೊತ್ತಿವೆ. ಸಾಮಾನ್ಯ ಜನರ ಬದುಕನ್ನು ಪ್ರತಿಬಿಂಬಿಸುವ ಅವರ ವಚನಗಳು ಶೋಷಿತ ಮತ್ತು ಅಂಚಿನ ಸಮುದಾಯಗಳಿಗೆ ಆತ್ಮಗೌರವ ಮತ್ತು ಧೈರ್ಯವನ್ನು ನೀಡಿದವು.

**ಹೆಣ್ಣಿಗಾಗಿ ಸತ್ತಡೆ ಜನನ ಮರಣ**
**ಹೊನ್ನಿಗಾಗಿ ಸತ್ತಡೆ ಜನನ ಮರಣ**
**ಮಣ್ಣಿಗಾಗಿ ಸತ್ತಡೆ ಜನನ ಮರಣ**
**ಪರಾಧನ ಪರಸತಿಗಾಗಿ ಸತ್ತಡೆ ಜನನ ಮರಣ**
**ಶಿವಭಕ್ತಿಗಾಗಿ ಸಾಯ ಕಲಿ ದೇವರ ದೇವ**

ಲೌಕಿಕ ಬದುಕಿಗಿಂತ ಆಧ್ಯಾತ್ಮಿಕ ಬದುಕು ಶ್ರೇಷ್ಠ, ಅದೇ ನಿಜವಾದ ಸಂಪತ್ತು ಎಂದು ಸಾರುತ್ತಾ ಬದುಕಿದ ವಚನಕಾರರಾಗಿದ್ದಾರೆ. ಮಡಿವಾಳ ಮಾಚಯ್ಯನವರು ಎಷ್ಟೋ ನಶಿಸಿ ಹೋಗುತ್ತಿದ್ದ ವಚನಗಳನ್ನು ಸಂಗ್ರಹ ಮಾಡಿ ಮುಂದಿನ ಪೀಳಿಗೆಗೆ ನೀಡಿದ ವಚನಕಾರರಾಗಿದ್ದಾರೆ. ಈತನೊಬ್ಬ ವೀರ ಯೋಧನೂ ಆಗಿದ್ದಾನೆ.

**ಅಂಬಿಗರ ಚೌಡಯ್ಯ**

ಅಂಬಿಗನೇ ನಂಬಿಗನಾಗಿದ್ದು, ಈತನು ದೋಣಿ ನಡೆಸುವವನಾಗಿ ತನ್ನ ಕುಲಕಸುಬನ್ನು ಶ್ರದ್ಧೆ-ನಿಷ್ಠೆಯಿಂದ ಮಾಡುತ್ತಾನೆ. ಇದು ಶಿವನ ಸೇವೆ ಎಂದು ಭಾವಿಸಿದ್ದು, ತನ್ನನ್ನು ನಂಬಿ ಬಂದ ಪ್ರಯಾಣಿಕರನ್ನು ಒಂದು ದಡದಿಂದ ಮತ್ತೊಂದು ದಡಕ್ಕೆ ಬಿಡುತ್ತಾ, "ಕುಲವೆಂಬ ಕಂಬಳಿ ಜಾಲ ಕಸುಬಿಲ್ಲದೆ ಹೊದಿದರೆ ತಣ್ಣಗಾಗದು ಕೇಳಯ್ಯ". ಕುಲದ ಗೌರವಕ್ಕೆ ಅಂಟಿಕೊಂಡರೂ ಕಸುಬಿಲ್ಲದೆ ಜೀವನ ಬಲಹೀನ. ಕುಲಕ್ಕಿಂತ ಕೆಲಸವೇ ನಿಜವಾದ ಧರ್ಮ ಎಂದು ಸಾರಿದ ಶ್ರೇಷ್ಠ ಶರಣ. ಮನುಷ್ಯನಾಗಿ ಹುಟ್ಟಿದವನು ಒಂದಲ್ಲ ಒಂದು ಕಸುಬನ್ನು ಮಾಡುತ್ತಾ ಗೌರವದಿಂದ ಬದುಕಬೇಕೆಂದು ತಿಳಿಸಿದ್ದಾನೆ.

**ಅಂಬಿಗ ಅಂಬಿಗ ಎಂದು ಕುಂದನುಡಿಯದಿರು**

ನಂಬಿದರೆ ಒಂದೇ ಹುಟ್ಟಲಿ ಕಡೆಯ ಹಾಯಿಸುವ ನಂಬಿಗರ ಚೌಡಯ್ಯ

ಅಂಬಿಗರ ಚೌಡಯ್ಯರ ವಚನಗಳ ಕೇಂದ್ರ ಭಾವನೆ ಕಾಯಕವೇ ದೇವರ ಪೂಜೆ ಎಂಬುದಾಗಿದೆ. ಅವರು ದೇವರನ್ನು ಪಡೆಯಲು ಬಾಹ್ಯ ಆಚರಣೆಗಳು, ಜಾತಿ ಗೌರವ ಅಥವಾ ವೇಷಭೂಷಣ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸುತ್ತಾರೆ. ನಿಷ್ಠೆಯಿಂದ ಮಾಡಿದ ಕೆಲಸವೇ ಶ್ರೇಷ್ಠ ಭಕ್ತಿ ಎಂಬ ಸಂದೇಶವನ್ನು ಅವರು ಸಾರುತ್ತಾರೆ. ಅವರ ವಚನಗಳಲ್ಲಿ ಕುಲಭೇದದ ವಿರುದ್ಧದ ಧ್ವನಿ ಸ್ಪಷ್ಟವಾಗಿದೆ. ಸಮಾಜದಲ್ಲಿ ಅಂಬಿಗ ವೃತ್ತಿಯನ್ನು ತಳಮಟ್ಟದ ಕೆಲಸವೆಂದು ಕಾಣುತ್ತಿದ್ದವರಿಗೆ ವಿರುದ್ಧವಾಗಿ, ಚೌಡಯ್ಯರು ಪ್ರತಿಯೊಂದು ವೃತ್ತಿಯೂ ಪವಿತ್ರ ಮತ್ತು ಗೌರವಯುತವೆಂದು ಘೋಷಿಸುತ್ತಾರೆ. ಮಾನವ ಮೌಲ್ಯವು ಅವನ ಕುಲದಿಂದಲ್ಲ, ಅವನ ಶ್ರಮ, ಸತ್ಯ ಮತ್ತು ನಡತೆಯಿಂದ

ನಿರ್ಧಾರವಾಗಬೇಕು ಎಂಬುದು ಅವರ ಸಂದೇಶ. ಅಂಬಿಗರ ಚೌಡಯ್ಯರ ವಚನಗಳು ಸರಳ ಭಾಷೆಯಲ್ಲಿ ಗಾಢ ಅರ್ಥವನ್ನು ಹೊಂದಿವೆ. ಅವು ಸಾಮಾನ್ಯ ಜನರ ಬದುಕಿನ ಅನುಭವಗಳನ್ನು ಪ್ರತಿಬಿಂಬಿಸುತ್ತವೆ.

**ಮಾದಾರ ಚೆನ್ನಯ್ಯ**

ಕರ್ನಾಟಕದ ಸಾಮಾಜಿಕ ಮತ್ತು ಧಾರ್ಮಿಕ ಇತಿಹಾಸದಲ್ಲಿ ಮಹತ್ವದ ಕ್ರಾಂತಿಯಾದ ಸಂದರ್ಭದಲ್ಲಿ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಇವರೊಂದಿಗೆ ಸಮಾಜದ ತೀರ ಕೆಳಸ್ತರದಲ್ಲಿದ್ದ ಮಾದಾರ ಚೆನ್ನಯ್ಯನು ಒಬ್ಬ ವಚನಕಾರನಾಗಿ ತನ್ನದೇ ಆದ ಕೊಡುಗೆಯನ್ನು ನೀಡಿದ್ದಾನೆ. ಮಾದಾರ ಚೆನ್ನಯ್ಯನು ಚರ್ಮದ ಕೆಲಸವನ್ನು ಮಾಡುತ್ತಾ, ಚಪ್ಪಲಿಯನ್ನು ಹೊಲೆದು ಜೀವನ ಸಾಗಿಸುವ ಕುಲಕಸುಬಿನ ವಚನಕಾರರಾಗಿದ್ದಾರೆ. ಈತನು ತನ್ನ ವಚನಗಳ ಮೂಲಕ ಕುಲಭೇದ, ವೃತ್ತಿಭೇದ ಮತ್ತು ಸಾಮಾಜಿಕ ಅಸಮಾನತೆಯನ್ನು ಧೈರ್ಯವಾಗಿ ಪ್ರಶ್ನಿಸಿದ ವಚನಕಾರ. ಈತನ ವಚನಗಳ ಕೇಂದ್ರ ತತ್ವ ಕಾಯಕವೇ ದೇವರ ಸೇವೆ ಎಂಬುದಾಗಿದೆ. ದೇವರನ್ನು ಪಡೆಯಲು ಯಾವ ಜಾತಿ, ಕುಲ, ಯಜ್ಞ-ಯಾಗಾದಿಗಳ ಬಾಹ್ಯವಾದ ಆಚರಣೆಯು ಅಗತ್ಯವಿಲ್ಲ; ಶುದ್ಧ ಮನಸ್ಸಿನಿಂದ ನಿಷ್ಠೆಯಿಂದ ಮಾಡುವ ಕೆಲಸವೇ ನಿಜಭಕ್ತಿ, ನಿಜಪೂಜೆ ಎಂದು ನಂಬಿದ ಶ್ರೇಷ್ಠ ವಚನಕಾರನಾಗಿದ್ದಾನೆ.

ಮನುಷ್ಯರಿಗೆ ಜನ್ಮದಿಂದಲ್ಲ, ಅವರು ಮಾಡುವ ಕಾಯಕದಿಂದ ಹಾಗೂ ನಡೆದುಕೊಳ್ಳುವ ಪ್ರಾಮಾಣಿಕತೆಯಿಂದ ನಿಜವಾದ ಗೌರವ ಸಲ್ಲುತ್ತದೆ ಎಂದು ಹೇಳುತ್ತಾ ಸಮಾಜದ ಶೋಷಿತ ವರ್ಗದಲ್ಲಿ ಅಪಾರವಾದ ಆತ್ಮಗೌರವ ಮತ್ತು ಧೈರ್ಯವನ್ನು ತುಂಬಿದ ವಚನ ಶ್ರೇಷ್ಠನಾಗಿದ್ದಾನೆ. ಮಾದಾರ ಚೆನ್ನಯ್ಯನು ಎಂದಿಗೂ ತನ್ನ ವೃತ್ತಿಯು ಕೀಳೆಂದು ಭಾವಿಸದೆ ಶ್ರಮದ ಘನತೆಯನ್ನು ಅರ್ಥಮಾಡಿಕೊಂಡು ಅದನ್ನೇ ಜೀವನದಲ್ಲಿ ಅಳವಡಿಸಿಕೊಂಡು ಬದುಕಿದ ವಚನಕಾರ. ಪ್ರತಿಯೊಂದು ವೃತ್ತಿಯು ಸಮಾಜಕ್ಕೆ ಅಗತ್ಯ ಮತ್ತು ಪವಿತ್ರ ಎಂಬ ಸಂದೇಶವನ್ನು ಸಾರುತ್ತಾ ಜೀವನದ ಮುಖ್ಯ ತತ್ವವನ್ನು ವಚನಗಳಲ್ಲಿ ತಿಳಿಸಿದ್ದಾನೆ.

**ಮಾದಾರ ಚೆನ್ನಯ್ಯರ ವಚನ (ಅರ್ಥಾನುಸಾರ)**

**ಕುಲವೆಂದರೇನು? ಕಸುಬೇನು?**
**ಕಾಯಕ ಮಾಡಿದ ಕೈಯಲ್ಲಿ ಶಿವನೆಲಸಿದರೆ,**
**ಚರ್ಮವೂ ಪವಿತ್ರ, ಚರ್ಮಗಾರನೂ ಶುದ್ಧ.**
**ಹೊರಗಿನ ವೇಷವಲ್ಲ, ಒಳಗಿನ ಸತ್ಯವೇ ದೇವರ ದಾರಿ,**
**ಕಾಯಕವೇ ಕೈಲಾಸ — ಶಿವನೇ ಸಾಕ್ಷಿ.**

**ಡೋಹಾರ ಕಕ್ಕಯ್ಯ**

ಈತ ಆಡಂಬರ ವಿರೋಧಿ, ದೇಹ ಮತ್ತು ಆತ್ಮ ವಿಚಾರ ಚರ್ಚೆ ಒಂದಾಗಬೇಕೆಂದ ಶರಣ. ದೇಹವೇ ವಸ್ತ್ರವಾಗಿ ಒಳಗಿನ ಚೈತನ್ಯವನ್ನು ಲಿಂಗಕ್ಕೆ

ಹೋಲಿಸಿ, ಹೊರಗಿನ ಆಭರಣ ಆಡಂಬರ ಬೇಡ, ಆತ್ಮ ಶುದ್ಧಿಯೇ ಮುಖ್ಯವಾಗಿದ್ದಾಗ ಬಾಹ್ಯ ಶೋಭೆಗೆ ಯಾವ ಬೆಲೆಯೂ ಇಲ್ಲ ಎಂದಿದ್ದಾರೆ. ಕುಲದಿಂದ ಮನುಷ್ಯನ ಮೌಲ್ಯ ಬರದು, ಕಾಯಕ ನಿಷ್ಠೆಯಿಂದ ಅಳೆಯಬೇಕೆಂದು ತಿಳಿಸಿದ್ದಾನೆ. ಬಾಯಿ ಮಾತಿಗಿಂತ ಬದುಕಿ ನಮ್ಮ ಜಾತಿಯನ್ನು ತಿಳಿಸಬೇಕೆಂದು ಹೇಳಿದ್ದಾನೆ.

**ಡೋಹಾರ ಕಕ್ಕಯ್ಯರ ವಚನಗಳು (ಅರ್ಥಾನುಸಾರ)**

**ಹೊರಗೆ ಶಿವಭಕ್ತಿ, ಒಳಗೆ ದೋಹರ,**
**ಇಂಥ ಕಾಯಕಕ್ಕೆ ಶಿವ ಒಲಿಯುವನೆ?**
**ಮಾತು ಒಂದಾಗಿ, ಮನ ಒಂದಾಗಿ,**
**ಕಾಯಕ ಶುದ್ಧವಾದರೆ ಅದೇ ಕೈಲಾಸ.**
**ತಳವಾರ ಕಾಮಿದೇವಯ್ಯ**

ಶ್ರೇಷ್ಠ ವಚನಕಾರರಲ್ಲಿ ಕಾಮಿದೇವಯ್ಯ ಒಬ್ಬರು. ತಳವಾರ ಕೆಲಸವನ್ನು ಮಾಡುತ್ತಾ "ಕೈಯಲ್ಲಿ ಕಾಯಕ, ಮನಸ್ಸಿನಲ್ಲಿ ಲಿಂಗ" ಇದಕ್ಕಿಂತ ಬೇರೆ ಕೈಲಾಸವಿಲ್ಲ, ಶ್ರಮಪೂರ್ಣವಾದ ಜೀವನವೇ ಧರ್ಮ ಎಂದು ತಿಳಿಸುತ್ತಾ, ನನ್ನ ವೃತ್ತಿ ಇರುವುದು ಅಹಂಕಾರಕ್ಕಲ್ಲ, ಲಿಂಗ ಸೇವೆ ಮಾಡಲು ಎಂದಿದ್ದಾರೆ. ಕಾಯಕವನ್ನು ಸೇವೆಗಾಗಿ ನೋಡುವುದು ಮುಖ್ಯವೇ ಹೊರತು ಅಹಂಕಾರದಿಂದಲ್ಲ. ಅಹಂಕಾರ ಇದ್ದರೆ ಲಿಂಗ ದೂರ, ವಿನಯವಿದ್ದರೆ ಲಿಂಗ ಸಮೀಪ; ವಿನಯದಿಂದ ನಾವು ಮುಕ್ತಿ ಮಾರ್ಗವನ್ನು ಕಾಣಬಹುದೆಂದ ಕಾಮಿದೇವಯ್ಯ.

ವಚನ ಸಾಹಿತ್ಯದ ಜೀವಾಳವಾಗಿದ್ದ ಕುಲಕಸುಬಿನವರು ತಮ್ಮ ಕುಲಕಸುಬುಗಳನ್ನು ಮಾಡುತ್ತಾ ವೃತ್ತಿಯ ಅನುಭವವನ್ನು ಪಡೆದು ಅರ್ಥಪೂರ್ಣವಾಗಿ ವಚನಗಳನ್ನು ರಚಿಸಿದ್ದಾರೆ. ಇಂತಹ ವಚನಗಳು ಎಲ್ಲಾ ಕಾಲಕ್ಕೂ, ಎಲ್ಲಾ ದೇಶಕ್ಕೂ ಅನ್ವಯವಾಗುತ್ತಾ ಬದುಕು ಕಟ್ಟಿಕೊಳ್ಳಲು, ಸಹಬಾಳ್ವೆಯಿಂದ ಜೀವನ ನಡೆಸಲು ಸಹಕಾರಿಯಾಗಿವೆ. ಲಿಂಗ ಹಾಗೂ ಜಾತಿಭೇದದ ಅಸಮಾನತೆಯ ವಿರುದ್ಧ ನಡೆದ ಸಮಗ್ರ ಸಾಮಾಜಿಕ ಕ್ರಾಂತಿಯಾಗಿ ಕುಲಕಸುಬಿನ ವಚನಗಳು ನಿಲ್ಲುತ್ತವೆ.

ಇಂದಿನ ಸಮಕಾಲೀನ ಸಮಾಜದಲ್ಲಿಯೂ ಕುಲ–ಕಸುಬಿನ ವಚನಕಾರರ ಚಿಂತನೆಗಳು ಅತ್ಯಂತ ಪ್ರಾಸಂಗಿಕವಾಗಿವೆ. ವೃತ್ತಿ ಅವಮಾನ, ಶ್ರಮದ ತಿರಸ್ಕಾರ, ಅಸಮಾನತೆ ಮತ್ತು ಕಪಟ ನಡತೆಗಳು ಇಂದಿಗೂ ಸಮಾಜದಲ್ಲಿ ಕಾಣಸಿಗುತ್ತಿವೆ. ಇಂತಹ ಸಂದರ್ಭದಲ್ಲಿ ವಚನಗಳ ಸಂದೇಶಗಳು ಮಾನವೀಯ, ಸಮಾನತೆಯ ಮತ್ತು ಗೌರವಪೂರ್ಣ ಸಮಾಜ ನಿರ್ಮಾಣಕ್ಕೆ ದಾರಿ ತೋರಿಸುತ್ತವೆ.

**ಪರಾಮರ್ಶನ ಗ್ರಂಥಗಳು:**

1. ಕಲಬುರ್ಗಿ ಎಂ.ಎಂ., (1991), ವಚನಕಾರರು ಮತ್ತು ಸಮಾಜ, ಹಂಪಿ: ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ.
2. ಶಿವರುದ್ರಪ್ಪ ಜಿ.ಎಸ್., (1987), ವಚನ ಸಾಹಿತ್ಯ, ಮೈಸೂರು: ಪ್ರಸಾರಂಗ, ಮೈಸೂರು ವಿಶ್ವವಿದ್ಯಾಲಯ.
3. ರಂಗಪ್ಪ, (2004), ವಚನ ಚಳವಳಿ ಮತ್ತು ಸಾಮಾಜಿಕ ಸಮಾನತೆ, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
4. ಚನ್ನಬಸವಣ್ಣ, (1998), ಶರಣ ಸಂಸ್ಕೃತಿ ಮತ್ತು ಕಾಯಕ ತತ್ವ, ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ ಪ್ರಕಾಶನ.
5. ನಿರಂಜನಸ್ವಾಮಿ ಎಸ್. ಸಿ., (2010), ಕುಲ–ಕಸುಬಿನ ವಚನಕಾರರು, ಬೆಂಗಳೂರು: ಸಾಹಿತ್ಯ ಅಕಾಡೆಮಿ.
6. ಬಸವಣ್ಣ, (2001), ಬಸವ ವಚನಗಳು, ಹಂಪಿ: ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ.
7. ತಿಪ್ಪೇಸ್ವಾಮಿ ಎಚ್., (1995), ವಚನ ಸಾಹಿತ್ಯದಲ್ಲಿ ಸಮಾಜ ಚಿಂತನೆ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
8. ಪಂಡಿತಾರಾಧ್ಯ, (2008), ಶರಣರ ತತ್ವ ಮತ್ತು ಜೀವನ ದೃಷ್ಟಿ, ಬೆಂಗಳೂರು: ನವಕರ್ನಾಟಕ ಪ್ರಕಾಶನ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.